sdmimd

**Kannada Prabha**

**Date:** 15-12- 2018 **Page No:** 2

**Edition:** Mysore **Language:** Kannada

# ಎಸ್‌ಡಿಎಂನಲ್ಲಿ ಸಮ್ಮೇಳನ ಶುರು

## 'ಕಾರ್ಯಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ' ಕುರಿತು ಆಯೋಜನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಎರಡು ದಿನಗಳ 'ಕಾರ್ಯಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ' ಕುರಿತ 7ನೇ ಅಂತಾರಾಷ್ಟ್ರೀಯ ಸಮ್ಮೇಳನ ಶುಕ್ರವಾರ ಆರಂಭವಾಯಿತು.



ಸಮ್ಮೇಳನ ಉದ್ಘಾಟಿಸಿದ ಚೆನ್ನೈನ ರಾಣೆ ಹೋಲ್ಡಿಂಗ್ಸ್‌ನ ಅಧ್ಯಕ್ಷ ಎಲ್. ಗಣೇಶ್ ಬದಲಾದ ತಂತ್ರಜ್ಞಾನ ಹಾಗೂ ಗ್ರಾಹಕರ ನಿರೀಕ್ಷೆಯ ಇಂದಿನ ಯುಗದಲ್ಲಿ ಪ್ರತಿಭೆ ಮೊದಲು ಎಂಬ ತತ್ವವನ್ನು ಸಂಸ್ಥೆಗಳು ಪ್ರೋತ್ಸಾಹಿಸಬೇಕಾದ ಅವಶ್ಯಕತೆಗಳು ಮತ್ತು ಸವಾಲುಗಳ ಬಗ್ಗೆ ಬೆಳಕು ಚೆಲ್ಲಿದರು. ಒಂದು ಸಂಸ್ಥೆಯ ಉದ್ದೇಶಗಳನ್ನು ಅಲ್ಲಿನ ನೌಕರರಿಗೆ ಮನದಟ್ಟು ಮಾಡಿಸುವ ಮೂಲಕ, ಸಂಸ್ಥೆಯ ಬೆಳವಣಿಗೆಗೆ ಬೇಕಾದ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಹೇಳಿದರು.

ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ. ಎನ್.ಆರ್. ಪರಶುರಾಮನ್ ಅವರು ಯಶಸ್ವಿ ಮಾನವ ಸಂಪನ್ಮೂಲ ನಿರ್ವಹಣೆಗಾಗಿ ಅವಶ್ಯವಿರುವ ಸಂವಹನದ ಪ್ರಾಮುಖ್ಯತೆ, ಪ್ರತಿಫಲಗಳು, ವ್ಯಕ್ತಿಯ ಹಾಗೂ ಸಾಂಸ್ಥಿಕ ಉದ್ದೇಶಗಳ ಹೊಂದಾಣಿಕೆ, ಕಾರ್ಯಕ್ಷೇತ್ರದಲ್ಲಿ ನೈತಿಕತೆ ಬಗ್ಗೆ ವಿವರಿಸಿದರು.

ಸಮ್ಮೇಳನದ ಮುಖ್ಯಸ್ಥ ಡಾ. ಮೌಸುಮಿ ಸೇನ್ ಗುಪ್ತ ಅವರು ಹೂಡಿಕೆಯಿಂದ ದೊರೆಯುವ ಪ್ರತಿಫಲಕ್ಕೆ ಕೊಡುಗೆ ನೀಡುವ ಮೂಲಕ ಒಂದು ಸಂಸ್ಥೆಯು ತನ್ನ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಮಾನವ ಸಂಪನ್ಮೂಲ ನಿರ್ವಹಣೆಯ ಪಾತ್ರದ ಬಗ್ಗೆ ಹೇಳಿದರು.

ಸಮ್ಮೇಳನದ ಉಪ ಮುಖ್ಯಸ್ಥ ಡಾ. ನೀಲಾಂಜನ್ ಸೇನ್ ಗುಪ್ತ, ಇಂಧೋರ್‌ನ ಐಐಎಂ ಮಾಜಿ ನಿರ್ದೇಶಕ ಪ್ರೊ. ರವಿಚಂದ್ರನ್, ನೋಯ್ಡಾದ ಎಂಬಿಎ ಯೂನಿವರ್ಸ್ ಡಾಟ್ ಕಾಮ್ ಸ್ಥಾಪಕ ಅಮಿತ್ ಅಗ್ನಿಹೋತ್ರಿ, ಲೀಡ್ ಕನ್ಸಲ್ಟಿಂಗ್ ಕಾರ್ಯಕಾರಿ ನಿರ್ದೇಶಕ ಮಹಾಲಿಂಗಂ, ಐಟಿಸಿ ಲಿ.ನ ರಾಜೇಂದ್ರ ಬಾಬು ಭಾಗವಹಿಸಿದ್ದರು.